# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1182 |
| ಸದಸ್ಯರ ಹೆಸರು | ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದವರು | ಮುಖ್ಯಮಂತ್ರಿಯವರು |
| ಉತ್ತರಿಸಬೇಕಾದ ದಿನಾಂಕ | 20-12-2018 |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮದ್ಯಸೇವನೆಯಿಂದ ಸುಮಾರು ಸಾವು-ನೋವು ಉಂಟಾಗುತ್ತಿದ್ದು, ಇದರಿಂದ ಹಲವಾರು ಕುಟುಂಬಗಳು ಬೀದಿ ಪಾಲಾಗುತ್ತಿದ್ದು, ಒಂದು ಕಡೆ ಜನರ ಆರೋಗ್ಯದ ಹಿತವನ್ನು ಕಾಪಾಡುವ ಸರ್ಕಾರವು ಇನ್ನೊಂದು ಕಡೆ ಮದ್ಯದಂಗಡಿಯನ್ನು ಹೆಚ್ಚಿಸಲು ಯೋಚಿಸುತ್ತಿರುವುದು ಸರ್ಕಾರದ ದ್ವಂದ್ವ ನೀತಿಯಲ್ಲವೇ; | ರಾಜ್ಯದಲ್ಲಿ 2016ನೇ ವರ್ಷದಲ್ಲಿ ವಿಧಾನ ಸಭಾ ಕ್ಷೇತ್ರವಾರು ಎಂ.ಎಸ್.ಐ.ಎಲ್ ಸಂಸ್ಥೆಗೆ ಹಂಚಿಕೆ ಮಾಡಿರುವ 900 ಸಿ.ಎಲ್-11(ಸಿ) ಮದ್ಯದಂಗಡಿಗಳಿಗೆ ಮಾತ್ರ ಸನ್ನದನ್ನು ಮಂಜೂರು ಮಾಡಲಾಗುತ್ತಿದೆ. ಇದನ್ನು ಹೊರತುಪಡಿಸಿ ಇತರೆ ಯಾವುದೇ ಚಿಲ್ಲರೆ ಮದ್ಯದಂಗಡಿಯನ್ನು ಹೆಚ್ಚಿಸಲು ಉದ್ದೇಶಿಸಿರುವುದಿಲ್ಲ. |
| ಆ) | ರಾಜ್ಯದ ತಾಲ್ಲೂಕು ಪ್ರದೇಶಗಳಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಎಲ್ಲೆಲ್ಲಿ ಮತ್ತು ಎಷ್ಟು ಮದ್ಯದಂಗಡಿಗಳನ್ನು ತೆರೆಯಲು ಅವಕಾಶ ನೀಡಬಹುದೆಂಬ ಸಮೀಕ್ಷೆ ನಡೆಸಲು ಸರ್ಕಾರ ಸುತ್ತೋಲೆ ಹೊರಡಿಸಿದೆ; | ಇಂತಹ ಯಾವುದೇ ಸುತ್ತೋಲೆಯನ್ನು ಸರ್ಕಾರ ಹೊರಡಿಸಿರುವುದಿಲ್ಲ. |
| ಇ) | ಮದ್ಯದಂಗಡಿಗಳಿಗೆ ಪರವಾನಗಿಗಳನ್ನು ನೀಡಲು ಇರುವ ಮಾನದಂಡಗಳೇನು; | ಮದ್ಯದ ಅಂಗಡಿಗಳಾದ ಸಿಎಲ್-2, ಸಿಎಲ್-7, ಸಿಎಲ್-9 ಇತ್ಯಾದಿ ಸನ್ನದುಗಳನ್ನು ಮಂಜೂರು ಮಾಡಲು ಕರ್ನಾಟಕ ಅಬಕಾರಿ (ದೇಶಿಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968 ರ ನಿಯಮ 3, 4ಬಿ ಮತ್ತು ನಿಯಮ 5, ಕರ್ನಾಟಕ ಅಬಕಾರಿ (ಸನ್ನದುಗಳ ಸಾಮಾನ್ಯ ಷರತ್ತುಗಳು) ನಿಯಮಗಳು, 1967ರ ನಿಯಮಗಳನ್ನು ಮತ್ತು ಮಾನ್ಯ ಸರ್ವೋಚ್ಚ ನ್ಯಾಯಾಲಯ ರಾಜ್ಯ/ರಾಷ್ಟ್ರೀಯ ಹೆದ್ದಾರಿಗಳ ಸಮೀಪದಲ್ಲಿ ಅಬಕಾರಿ ಸನ್ನದುಗಳ ಇರುವಿಕೆ ಕುರಿತು ನಿರ್ದೇಶಿಸಿರುವ ಅಂಶಗಳನ್ನು ಮಾನದಂಡವಾಗಿ ಅನುಸರಿಸಲಾಗುತ್ತಿದೆ. |
| ಈ) | ಗ್ರಾಮೀಣ ಪ್ರದೇಶಗಳಲ್ಲಿ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಜನಸಂಖ್ಯಾವಾರು ಇರಬೇಕಾದ ಮದ್ಯದಂಗಡಿಗಳೆಷ್ಟು; | ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968 ರ ನಿಯಮ 12(3)(ಎ) ರನ್ವಯ ಪಟ್ಟಣ ಪ್ರದೇಶದಲ್ಲಿ ಪ್ರತಿ 7,500 ಜನಸಂಖ್ಯೆಗೆ ಒಂದು ಚಿಲ್ಲರೆ ಮದ್ಯದ ಅಂಗಡಿ ಪರವಾನಗಿ ಅಥವಾ ಭಾಗಶಃ 3,500 ಜನಸಂಖ್ಯೆ ಹೆಚ್ಚಳವಾದಲ್ಲಿ ಒಂದು ಪರವಾನಗಿ ಮತ್ತು ಕರ್ನಾಟಕ ಅಬಕಾರಿ (ದೇಶಿ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು, 1968 ರ ನಿಯಮ 12(3)(ಬಿ) ರನ್ವಯ ಗ್ರಾಮೀಣ ಪ್ರದೇಶದಲ್ಲಿ ಪ್ರತಿ 15,000 ಜನಸಂಖ್ಯೆಗೆ ಒಂದು ಚಿಲ್ಲರೆ ಮದ್ಯದ ಅಂಗಡಿ ಪರವಾನಗಿ ಅಥವಾ ಭಾಗಶಃ 7,500 ಜನಸಂಖ್ಯೆ ಹೆಚ್ಚಳವಾದಲ್ಲಿ ಒಂದುಪರವಾನಗಿ ಮಂಜೂರು ಮಾಡಲು ಅವಕಾಶ ಇರುತ್ತದೆ. |

....2

| | | |
|---|---|---|
| ಉ) | ರಾಜ್ಯದಲ್ಲಿ ಒಟ್ಟಿಗೆ ಕೊಡಮಾಡಲಾಗಿರುವ ಮದ್ಯದಂಗಡಿಗಳ ಪರವಾನಗಿಗಳು ಎಷ್ಟು? (ಜಿಲ್ಲಾವಾರು ಮಾಹಿತಿ ಒದಗಿಸುವುದು) | ದಿನಾಂಕ:31-10-2018 ರ ಅಂತ್ಯಕ್ಕೆ ರಾಜ್ಯದಲ್ಲಿ ವಿವಿಧ ರೀತಿಯ ಒಟ್ಟಾರೆ 10,566 ಮದ್ಯದಂಗಡಿಗಳ ಪರವಾನಗಿಗಳು ನೀಡಲಾಗಿರುತ್ತದೆ. ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |

ಆಇ 83 ಇಎಲ್‌ಕ್ಯೂ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ

